ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ಪ್ರಸ್ತುತ ದಾವೆಯಲ್ಲಿ ನೀವು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿಲ್ಲದೇ ಇದ್ದರೂ ಸಹ ಪಕ್ಷಗಾರರಾಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸುತ ದಾವೆಯನ್ನು ನಿಂಗಮ್ಮನವರು ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿ ನಿಂಗಮ್ಮನವರು ಈಗಲೂ ಸಹ ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿರವರಿಗೆ ಬಿ.ಪಿ. ಷೂಗರ್ ಮತ್ತು ಮಂಡಿ ನೋವು ಇರುತ್ತದೆ. ಆ ಬಗ್ಗೆ ವೈದ್ಯರಿಂದ ಯಾವುದೇ ದಾಖಲೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ವಾದಿ ನಿಮ್ಮ ತಾಯಿ ಆರೋಗ್ಯವಾಗಿದ್ದರೂ ಸಹ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ವಿಶೇಷ ಅಧಿಕಾರ ಪತ್ರವನ್ನು ಪಡೆದುಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿರುತ್ತದೆ. ನಿಪಿ-1 ರ ಅಧಿಕಾರ ಪತ್ರವನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ವಕೀಲರ ಕಛೇರಿಯಲ್ಲಿ ಮಾಡಿರುತ್ತೇವೆ. ದಿನಾಂಕ 17.01.2023 ರಂದು ನಮ್ಮ ತಾಯಿ ಆರೋಗ್ಯ ಸರಿ ಇರಲಿಲ್ಲ.

ಪ್ರಸ್ತುತ ದಾವೆಯನ್ನು ಸಲ್ಲಿಸಲು ನಾನು ಮತ್ತು ತಾಯಿ ವಾದಿ

ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ಸಾಕ್ಷಿಗೆ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಆರೋಗ್ಯವಾಗಿದ್ದು ವಕೀಲರ ಕಛೇರಿಗೆ ಬಂದು ಮಾಹಿತಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ದಿನಾಂಕ 17.01.2023 ರಂದು ನಿಮಗೆ ವಿಶೇಷ ಅಧಿಕಾರ ಪತ್ರವನ್ನು ನೀಡಿ ನ್ಯಾಯಾಲಯಕ್ಕೆ ವಕೀಲರು ಮೂಲಕ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಾಯಿ ಕೊಟ್ಟಿರಬಹುದು ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಾವೆಯಲ್ಲಿ ಯಾವ ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಾಯಿಗೆ ತೊಂದರೆ ಕೊಡುತ್ತಿದ್ದ ಕಾರಣ ಸಲ್ಲಿಸಿರುತ್ತಾರೆ. ವಾದಿ ನಮ್ಮ ತಾಯಿಯರು ಒಟ್ಟು 7 ಜನ ಪ್ರತಿವಾದಿಗಳ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ವಾದಿ ಸರ್ವೇ ನಂಬರ್ 14 ರಲ್ಲಿ 2 ಎಕರೆ ಜಮೀನಿಗೆ ಸಂಬಂಧಿಸಿದಂತೆ ದಾವೆ ಮಾಡಿರುತ್ತಾರೆ. ದಾವಾ ಆಸ್ತಿಯ ಚಕ್ ಬಂದಿ ನನಗೆ ತಿಳಿದಿರುತ್ತದೆ, ಪೂರ್ವಕ್ಕೆ ರಾಜಶೇಖರಯ್ಯನವರ ಸ್ವತ್ತು, ಪಶ್ಚಿಮಕ್ಕೆ ಲಕ್ಷ್ಮಣಯ್ಯನವರ ಜಮೀನು, ಉತ್ತರಕ್ಕೆ ಕೋಡಿ ಹಳ್ಳ ಮತ್ತು ದಕ್ಷಿಣಕ್ಕೆ ಆಲೆ ಮನೆ ಇರುತ್ತದೆ. ದಾವಾ ಆಸ್ತಿಯನ್ನು ನಮ್ಮ ತಾಯಿಯವರು ಲಕ್ಷ್ಮಮ್ಮನವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ದಾವಾ ಆಸ್ತಿ ಅಸ್ಥಿತ್ವದಲ್ಲಿ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ 3 ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ವಾದಿ ನಿಮ್ಮ ತಾಯಿಯವರು ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಬಾನಂದೂರು ಗ್ರಾಮದ ಸರ್ವೇ ನಂಬರ್ 14 ರ ಸ್ವತ್ತು ಅಸ್ಥಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1969 ರಿಂದಲ್ಲೂ ಬಾನಂದೂರು ಗ್ರಾಮದಲ್ಲಿ ಸರ್ವೇ ನಂಬರ್ 14 ರ ಸ್ವತ್ತು ಅಸ್ಥಿತ್ವದಲ್ಲಿ ಇರಲಿಲ್ಲ

ಬದಲಿಗೆ ಸರ್ವೇ ನಂಬರ್ 14/ಎ, 14/1, 14/ಬಿ ಮತ್ತು 14/2 ರ ಸ್ವತ್ತುಗಳು ಮಾತ್ರ ಅಸ್ಥಿತ್ವದಲ್ಲಿ ಇದ್ದವು ಎಂದರೆ ಸಾಕ್ಷಿಯು 14 ರ ಸರ್ವೇ ನಂಬರ್ ಜಮೀನು ಇತ್ತು ಎಂದು ನುಡಿಯುತ್ತಾರೆ. ಬಾನಂದೂರು ಗ್ರಾಮದ ಸರ್ವೇ ನಂಬರ್ 14 ರ ಸ್ವತ್ತು ಅಸ್ಥಿತ್ವದಲ್ಲಿ ಇಲ್ಲದೇ ಇದ್ದರೂ ಸಹ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-7 ರಿಂದ ನಿಪಿ-19 ರ ದಾಖಲೆಗಳಲ್ಲಿ ಸರ್ವೇ ನಂಬರ್ 14 ಜಮೀನಿಗೆ ಸಂಬಂಧಿಸಿದ ದಾಖಲೆಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-19 ರ ಪಹಣಿ ಪತ್ರಿಕೆಗಳು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-19 ರ ಪಹಣಿ ಪತ್ರಿಕೆಗಳಲ್ಲಿ ನಿಮ್ಮ ತಾಯಿಯ ಹೆಸರಿಗೆ 2 ಎಕರೆ ಜಮೀನು ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-19 ರ ಪಹಣಿ ಪತ್ರಿಕೆಗಳಲ್ಲಿ ಸರ್ವೇ ನಂಬರ್ 14/ಎರಲ್ಲಿ 1 ಎಕರೆ 17 ಗುಂಟೆ ಮತ್ತು ಸರ್ವೇ ನಂಬರ್ 14/ಬಿ 23 ಗುಂಟೆ ಜಮೀನು ನಿಮ್ಮ ತಾಯಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸುವ ಸಮಯದಲ್ಲಿ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಆ ಸಮಯದಲ್ಲಿ ನೀವು ಸರ್ವೇ ನಂಬರ್ 14/1 ಮತ್ತು 14/2 ರ ಪಹಣಿ ಪತ್ರಿಕೆಗಳನ್ನು ಮಾತ್ರ ಹಾಜರುಪಡಿಸಿರುತ್ತೇವೆ ಎಂದರೆ ಸಾಕ್ಷಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಸಮಯದಲ್ಲಿ ಹಾಜರುಪಡಿಸಿರುವ

ಪಹಣಿ ಪತ್ರಿಕೆಗಳಲ್ಲಿ ಸರ್ವೆ ನಂಬರಿ 14/1 ರಲ್ಲಿ 1 ಎಕರೆ 17 ಗುಂಟೆ ಮತ್ತು ಸರ್ವೇ ನಂಬರ್ 14/2 ರಲ್ಲಿ 23 ಗುಂಟೆ ಜಮೀನು ನಿಮ್ಮ ತಾಯಿಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ನೀವು ಹಾಜರುಪಡಿಸಿರುವ ನಿಪಿ-7 ರ ಪಹಣಿ ಪತ್ರಿಕೆಯಲ್ಲಿಲ್ಲಿ 1968-69 ರಲ್ಲಿ ಎ.ಡಿ.ಎಲ್.ಆರ್ ಆದೇಶದ ಮೇರೆಗೆ ದುರಸ್ತು ಎಂದು ನಮೂದು ಇರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.